ಈ ಯೋಜನೆಯ ಸಣ್ಣ ನೀರಾವರಿ ಕೆಲಸಗಳಲ್ಲಿ ಆಕ್ರಮಗಳು ನಡೆದಿವೆಯೆಂದು ವಿಧಾನ ಸಭಾ ಸದಸ್ಯರಾದ ಶ್ರೀ ಕೆ. ಹೆಚ್. ಹನುಮೇಗೌಡರು ೧೭-೬-೮೦ರಲ್ಲಿ ಸರ್ಕಾರಕ್ಕೆ ದೂರು ಕೊಟ್ಟಿದ್ದರ ಮೇರೆಗೆ ಈ ಬಗ್ಗೆ ಜಿಲ್ಲಾಧಿಕಾರಿಗಳಿಂದ ಪರಿಶೀಲನೆ ನಡೆದಿರುತ್ತೆ. ಜಿಲ್ಲಾಧಿಕಾರಿಗಳ ಪರಿಶೀಲನಾ ವರದಿಯು ದಿನಾಂಕ ೧೯-೯-೮೦ರಲ್ಲಿ ಸರ್ಕಾರಕ್ಕೆ ಬಂದಿರುತ್ತದೆ.

ಜಿಲ್ಲಾಧಿಕಾರಿಗಳಿಂದ ಬಂದ ವರದಿಯ ಮೇಲೆ ಉದ್ಯೋಗ ದೃಢೀಕರಣ ಯೋಜನೆ ಕೆಲಸಗಳನ್ನು ಇಲಾಖೆಯ ಹಿರಿಯ ಲೆಕ್ಕಪರಿಶೋಧನಾಧಿಕಾರಿಗಳಿಂದ ಪರಿಶೀಲಿಸಲಾಯಿತು. ಈ ವಿಷಯದಲ್ಲಿ ಮುಂದಿನ ಕ್ರಮ ಸರಕಾರದ ಪರಿಶೀಲನೆಯಲ್ಲಿದೆ.

Plying of Buses in Hassan District

4.(37) SRI K. H. HANUME GOWDA (Hassan).—SRI J. D. SOMAPPA (Sakalespur) and SRI D. B. GANGADHARAPPA (Arasikere).—Will the Minister for Transport and Minor Irrigation be pleased to State.—

(a) whether it is a fact that Buses to Hassan District are not plying as per the Scheduled timings,

(b) whether it had come to the notice of Government the Buses are stopped due to breakdown and machinery troubles,

(c) if so, measures taken by Government to avoid this inconvenience ?

SRI M.M. J. SADYOJATHA.—(Minister for Transport & Minor Irrigation).—

(a) About 30% of the buses are not being operated as per the Scheduled timings.

(b) Yes on certain occasion.

(c) (i) Tightening the vehicle maintenance programme in the workshops.

ii) Initiating action against the crew who unauthorisedly absent from duty.

ಹಾಸನದ ಗ್ರಾಮಗಳಲ್ಲಿ ಕುಡಿಯುವ ನೀರಿನ ಯೋಜನೆಯ ಬಗ್ಗೆ

೫. (೩೮) ಶ್ರೀ ಕೆ.ಎಚ್. ಹನುಮೇಗೌಡ (ಹಾಸನ).—ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತಿರಾಜ್ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸ ವರೆ.—

(ಅ) ಹಾಸನ ಕ್ಷೇತ್ರದ ಶಾಂತಿಗ್ರಾಮ, ಕಟ್ಟಾಯ, ಕಸಬ ಹೋಬಳಿಗಳ ಯಾವ ಯಾವ ಗ್ರಾಮಗಳಲ್ಲಿ ಗ್ರಾಮಾಂತರ ಪ್ರದೇಶದ ಕುಡಿಯುವ ನೀರಿನ ಯೋಜನೆಯು ಯಾವ ಯಾವ ತಾರೀಖಿನಲ್ಲಿ ಕಾರ್ಯಗತವಾಗಿದೆ,

(ಆ) ಯಾವ ಯಾವ ಗ್ರಾಮಗಳ ಈ ಯೋಜನೆಯು ಯಾವ ಯಾವ ತಾರೀಖಿನಿಂದ ನಿಂತು ಹೋಗಿದೆ.

(ಇ) ಈ ಯೋಜನೆಗಳನ್ನು ಪುನಃ ಪ್ರಾರಂಭಿಸಿ ಈ ಗ್ರಾಮಗಳ ಜನರಿಗೆ ಕುಡಿಯುವ ನೀರು ಒದಗಿಸಲು ಸರ್ಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ ?

ಶ್ರೀ ಬಿ. ರಾಮಯ್ಯ (ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತಿರಾಜ್ ಮಂತ್ರಿಗಳು).—

(ಅ) ಹಾಸನ ಜಿಲ್ಲೆಯಲ್ಲಿ ಗ್ರಾಮಾಂತರ ಕುಡಿಯುವ ನೀರಿನ ಯೋಜನೆಗಳು ಮುಗಿದ ವಿವರಗಳು ಈ ರೀತಿ ಇವೆ.—

ಹೋಬಳಿ	ಗ್ರಾಮ	ಕೆಲಸ ಮುಗಿದ ತಾರೀಖು
ಶಾಂತಿಗ್ರಾಮ	ಶಾಂತಿಗ್ರಾಮ	೧-೩-೧೯೫೭
ಕಟ್ಟಾಯ	ಕಬ್ಬತ್ತಿ ಅಂಕಪುರ	೧-೧೦-೧೯೭೧
	ಗೊರೂರು	೧೨-೯-೧೯೭೯
	ಚನ್ನಂಗಿಹಳ್ಳಿ	೩೧-೮-೧೯೭೮
ಕಸಬಾ	ಗವೇನಹಳ್ಳಿ	೨೨-೯-೧೯೭೪
	ಕಂದಲಿ	೨-೩-೧೯೭೦
	ಮೊಸಳೆ ತಿಮ್ಮನಹಳ್ಳಿ	೧೦-೮-೧೯೭೫
	ಚಿಕ್ಕೊಂಡಗೊಳ	೨೦-೮-೧೯೭೪

(ಆ) ಶಾಂತಿಗ್ರಾಮ ಯೋಜನೆಯು ೧೯೬೯ ರಿಂದ ನಿಂತುಹೋಗಿದೆ.

(ಇ) ಈ ಯೋಜನೆಯು ಪಂಪ್‌ನಲ್ಲಿ ಹೂಳುತುಂಬಿ ನಿರುಪಯುಕ್ತವಾಗಿದ್ದು ಹಾಗೂ ಕೊಳವೆ ಗಳು ತುಕ್ಕು ಹಿಡಿದಿದ್ದು ಉಪಯೋಗಕ್ಕೆ ಬಾರದಿರುವುದರಿಂದ ದುರಸ್ತಿಗೊಸ್ಕರ ಹೊಸ ಬೋರ್‌ವೆಲ್ ಒಂದನ್ನು ತೋಡಿ ನೀರೆತ್ತಲು ಯಂತ್ರೋಪಕರಣಗಳನ್ನು ಸ್ಥಾಪಿಸಲಾಗಿದೆ. ವಿದ್ಯುಚ್ಛಕ್ತಿ ಮಂಡಲಿ ಯಿಂದ ವಿದ್ಯುಚ್ಛಕ್ತಿ ಕೂಡಾ ಸರಬರಾಜು ದೊರಕಿರುವುದರಿಂದ ಈ ಯೋಜನೆಯು ಪುನಃ ತಾ॥ ೧೦-೭-೧೯೮೦ ರಿಂದ ಪ್ರಾರಂಭಿಸಲಾಗಿದೆ.

ಹಾಸನದಲ್ಲಿ ಸೊಳ್ಳೆಗಳ ನಿವಾರಣೆಯ ಬಗ್ಗೆ

೬. (೫೯) ಶ್ರೀ ಕೆ.ಎಚ್. ಹನುಮೇಗೌಡ (ಹಾಸನ).—ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ವಿಷಯಗಳನ್ನುದಯವಿಟ್ಟು ತಿಳಿಸುವರೆ.—

(ಅ) ಹಾಸನ ಪಟ್ಟಣದ ಹೊಸ ಲೈನ್ ಪ್ರದೇಶದಲ್ಲಿರುವ ಚಿಪ್ಪಿನಕಟ್ಟೆಗೆ ಹಾಸನ ಪಟ್ಟಣದ ಅರ್ಧ ಪ್ರದೇಶದ ಕೊಳಚೆ ನೀರು ಶೇಖರಣೆಯಾಗಿ, ಸೊಳ್ಳೆಗಳು ಉತ್ಪತ್ತಿ ಕೇಂದ್ರವಾಗಿದ್ದು ಸುತ್ತಮುತ್ತಲ ನಿವಾಸಿಗಳು ಜನರ ಆರೋಗ್ಯಕ್ಕೆ ಕಂಟಕಪ್ರಾಯವಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೆ,

(ಆ) ಜನರ ಆರೋಗ್ಯದ ದೃಷ್ಟಿಯಿಂದ ಈ ಕಟ್ಟೆಯ ಹಿಂಭಾಗದ ತರಿ ಜಮೀನನ್ನು ಅಕ್ವೈರ್ ಮಾಡಿಕೊಂಡು ಸೈಟುಗಳನ್ನಾಗಿ ಪಾರ್ಪಡಿಸುವುದಾಗಿಯೂ ಚಿಪ್ಪಿನಕಟ್ಟೆಯನ್ನು ಮುಚ್ಚುವುದಾಗಿಯೂ ಕಳೆದ ಶಾಸನ ಸಭೆಯಲ್ಲಿ ಸಚಿವರು ಭರವಸೆ ಕೊಟ್ಟಿದ್ದು ನಿಜವಲ್ಲವೇ,

(ಇ) ಇದರ ಬಗ್ಗೆ ಸರ್ಕಾರ ಕೈಕೊಂಡಿರುವ ಕ್ರಮಗಳೇನು ?

ಶ್ರೀ ಧರ್ಮಸಿಂಗ್ (ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು).—

(ಅ) ಹಾಸನ ನಗರದ ಕೊಳಚೆ ನೀರು ಚಿಪ್ಪಿನಕಟ್ಟೆಯಲ್ಲಿ ಶೇಖರಣೆಯಾಗದಂತೆ ಕ್ರಮ ಕೈಗೊಳ್ಳಲಾಗುತ್ತದೆ. ಹಾಸನ ನಗರದಲ್ಲಿ ಮಲೇರಿಯಾ ನಿರ್ಮೂಲನ ಸ್ಕೀಂ ಮಂಜೂರಾಗಿದ್ದು ಸೊಳ್ಳೆಗಳ ಉತ್ಪತ್ತಿಯನ್ನು ನಿಯಂತ್ರಣಕ್ಕೆ ತಂದಿರುತ್ತೆ.

(ಆ) ಹೌದು.—

(ಇ) ಸದರಿ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡ ನಂತರ ಆ ಪ್ರದೇಶದಲ್ಲಿ ಸೈಟುಗಳನ್ನು ಮಾಡಿ ನಿವೇಶನ ರಹಿತರಿಗೆ ವಿಲೇವಾರಿ ಮಾಡಲಾಗುವುದು.